313

3. ಈ ಹರಾಜಿನ ಚಡ.ದರಖಾಸ್ತು ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡುವ ಪರಿಯಂತ ಖಾಯಮಾದ್ದಾಗಿ ತಿಳಿದುಕೊಳ್ಳ ಕೂಡದು.

4. ಈ ಇಜಾರೆಯು ಸ॥ 1891ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿ ತರತಕ್ಕದ್ದು.

5. ಕ್ರಯದಾರನು ಹರಾಜು ಕಾಲ್ಮದಲ್ಲಿ ಕ್ರಯದ ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಡಿಪಾಜಿಟ್ ಯಿಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಡೆಪ್ಯೂಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದ ವಳಗಾಗಿ ಕ್ರಯದ ಪಟ್ಟು ಮೊಬಲಗಿನ ಮೇಲೆ ರೂಪಾಯಿ ಬಂದಕ್ಕೆ ಬಂದಾಣೆಯಂತೆ ಆಗುವ ಲೋಕಲ್‌ಸೆಸ್ ದೇ ಖೀಲ್ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಯಿಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಹಾಂಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡದಿದ್ದರೂ ಅಥವಾ ಬಾಕಿ ಕ್ರಯದ ಮೊಬಲಗು ಪಾವತಿ ಮಾಡದಿದ್ದರೂ ಹಕ್ಕುದಾರಿಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ಲುಕ್‌ಸಾನಿಗೂ ವಳಪಟ್ಟು ಪುನಹ ವಿಕ್ರಯಿಸಲ್ಪಡುವದು.

6. ಹರಾಜು ಷರತ್ತುಗಳು.

(a) ಹಿಡುವಳಿ ಜಮೀನಿನಲ್ಲಿ ಯಿರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವಳಿದಾರನ ಸಮ್ಮತಿಯನ್ನ ಪಡಿಯಬೇಕು, ಜಮೀನು ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೂಡದು ಇಜಾರೆದಾರನಿಗೆ ಮಾರಬೇಕೇ ಹೊರ್ತು ಇತರ ಜನಗಳಿಗೆ ಮಾರಲೂ ಕೂಡದು.

(b) ಇಜಾರೇದಾರನು ಹುಲ್ಲುಬನ್ನಿ ಇಜಾರೆದಾರರ ಚಲಾವು ಹಕ್ಕಿನಲ್ಲಿ ಪ್ರವೇಸಿಸ ಕೂಡದು.

(c) ಬಂಜರ್ ಜಮೀರ್ಾಗಳು ಸಾಗುವಳಿ ಬಗ್ಯೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟು ಬಿಡುವದಕ್ಕೆ ಕುರಂಗದ ಇಜಾರೆದಾರನು ಅಡ್ಡಿ ಹೇಳ ಕೂಡದು, ಅಂಥಾ ಜಮೀನುಗಳಲ್ಲಿ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಇಜಾರೇದಾರನಿಗೆ ವುಳದಿರುತ್ತೆ.

(d) ಇಜಾರೆದಾರನು ಕಲ್ಲುಗಳಿಗೋಸ್ಕರ ಜಮೀರ್ಾಗಳನ್ನು ಆಗಿಯಕೂಡದು. ಬಂದು ವೇಳೆ ಹಾಗೆ ಆಗದಲ್ಲಿ ಆ ಗುಂಡಿಗಳನ್ನ ತಕ್ಷಣ ಮುಚ್ಚಿ ಬಿಟ್ಟು ಸಾಗುವಳಿಗೆ ಜಮೀರ್ ಲಾಯಕ್ ಯಿರುವ ಹಾಗೆ ಮಾಡಬೇಕು.

ಸಿ. ಮಾದಣ್ಣ
ಡೆಪ್ಯೂಟಿ

ನಗರ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

1890ನೇ ಇಸವಿ ಅರ್ಜೀ ನುಬರ್. 24.

ಮೃತಪಟ್ಟ ನರಸಿಂಹಭಟ್ಟರ ಆಸ್ತಿ ವಿಷಯದಲ್ಲಿ—

ಮೈನರು ಮಂಜಭಟ್ಟನು ಮೃತಪಟ್ಟ ಸದರೀ ನರಸಿಂಹಭಟ್ಟರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ಮೈನರ್ ಗಾರ್ಡಿಯ್ಯನ್ ಆದ ತೀರ್ಥಹಳ್ಳಿ ತಾಲ್ಲೂಕು ನೆಲ್ಲಿಗೆ ಸ್ಥಳದ ಶ್ರೀನಿವಾಸಭಟ್ಟನು ಮೆಲ್ಲಿಗೆ ವಾಸಸ್ಥರಾಗಿ ಮೃತಪಟ್ಟ ನರಸಿಂಹಭಟ್ಟರ ಜೆಂದಗಿ ಬಗ್ಯಾಗಿ ಬರತಕ್ಕ 2,000 ರೂಪಾಯಿ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಶ್ರೀನಿವಾಸಭಟ್ಟನ ಅರ್ಜೀಯನ್ನು 1890ನೇ ಇಸವಿ ಜೂನ್ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸಿಂಹಭಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟ್ರರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಅರ್ಜಿ ನಂಬರ್ 31.

ಮೃತಪಟ್ಟ ಕೇಶವಾವಧಾನಿ ವುರಫ್ ಅಯ್ಯಂಣಾವಧಾನಿ ಆಸ್ತಿ ವಿಷಯದಲ್ಲಿ—

ಮೈನರ್ ಅರ್ಜಿದಾರು 1 ರಂಗಣ್ಣ 2 ವೆಂಕಟಸುಬಯ್ಯ, ಮೃತಪಟ್ಟ ಸದರೀ ಕೇಶವಾವಧಾನಿ ವುರಫ್ ಅಯ್ಯಂಣಾವಧಾನಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕ ಮುಗಳೂರು ತಾಲ್ಲೂಕು ಕಂಜೇನಹಳ್ಳಿ ಸ್ಥಳದ ಸದರೀ ಮೈನರ್‌ಗಳ ತಾಯಿ ತಾಯಮ್ಮನು ಸದರೀ ಕಂಜೇನಹಳ್ಳಿ ವಾಸಸ್ಥನಾಗಿ ಮೃತಪಟ್ಟ ಕೇಶವಾವಧಾನಿ ವುರಫ್ ಅಯ್ಯಂಣಾವಧಾನಿ ಜೆಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ತಾಯವ್ಮನ ಅರ್ಜಿಯನ್ನು 1890ನೇ ಇಸವಿ ಜೂನ್ ತಿಂಗಳು ತಾರೀಖು 13ರಲ್ಲು ಕೆಳಿ ಸರಟೆ ಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲವೆಲ್ಲಿ ಸದರೀ ವ್ಯತಪಟ್ಟ ಕೇಶವಾವಧಾನಿ ವೆರಳ ಅಯ್ಯಂಣಾವಧಾನಿ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1890ನೇ ಇಸವಿ ಏಪ್ರಿಲ್ ತಿಂಗಳು 1ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಕೊಡಗು ಫಾರೆಸ್ಟ್ ಇಲಾಖೆ.

ನೋಟಿಸ್.

ಸ॥ 1890ನೇ ಇಸವಿ ಏಪ್ರಿಲ್ ತಾರೀಖು 14ರಲ್ಲು.

ಇದರಡಿ ನಮೂದು ಮಾಡಿದ ತೊಲೆಗಳು ಇದೇ ಇಸವಿ ಮೇ ತಾರೀಖು 10ರಲ್ಲು ಹುಣಸೂರು ಡಿಪೋದಲ್ಲಿ ಹರಾಜು ಹಾಕಲ್ಪಡುತ್ತವೆ.

ತ್ಯಾಗ	540 ತೊಲೆ	17100 ಸಲೆ ಅಡಿ.
ಹೊನ್ನೆ ವಗ್ಗೆರೆ	720 ..	19700 ..
ತ್ಯಾಗದ ಮರದ ಕುಯಿದ ಸಾಮಾನು		8 750 ..
ಆರೆಕಾಲು ಪಟ್ಟಿಮರ	32550	

ಷರತ್—ಕೊಡಗು ಚೀಫ್ ಕಮ್ಮಿಷನರ್ ಸಾಹೆಬರವರ ಸ॥ 1889ನೇ ಇಸವಿ ಡಿಸಂಬರ್ ತಾರೀಖು 19 ನಂಬರ್ 53ರ ನೋಟಿಫಿಕೇರ್ಷನ್‌ನಲ್ಲಿ ಕಂಡ ಮೇರೆ ಕೇಕಡಾ 10ರಪ್ಪು ಮೊಬಲಗು ಹರಾಜು ಕಾಲದಲ್ಲಿ ಕೊಡಬೇಕು. ಬಾಕಿ ಆಗುವ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು ಎಂದು ತಿಂಗಳೊಳಗೆ ಕೊಡಬೇಕು.

ಜೆ. ವಿಕ್ಕಿ,
ಡೆಪ್ಯೂಟಿ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್.

ಮೈಸೂರ ಗೆಜೆಟ್ ಚಂದಾ ದರ ವಗ್ಗೆರೆ.

ತಾರೀಖು 26ನೇ ಜನವರಿ 1889.

ಮೈಸೂರು ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ. ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳು ಬೆಂಗಳೂರಲ್ಲಿರುವ ಮೈಸೂರು ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲು ಮೈಸೂರು ಹೊರತು ಕಾಯ ಇತರ ಸ್ಥಳ
	ರೂ. ಆ.	ರೂ. ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	4 8

ಥಫ್ ಮಾಹೇ ಯಾ ಕ್ವಾರ್ಟರಿಗೆ ದಾಮಾಷಾಯಿ ಪ್ರಕಾರ ದರಗಳು.

ಖಾಲಿತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇರ್ಷ್ ಯಾ ಆಕ್ಟ್ಯುಗಳು ಯಾವದೂ ಇಲ್ಲದಿದ್ದರೆ. 0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಬೆ... ಕೇಳಿ ತಿಳಿದು ಕೊಳ್ಳಬಹುದು.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟ್ಯು ಅನುಸರಿಸಿ ಸರ್ಟಿಫಿಕೇಟ್

ಬಗ್ಯೆ ನೋಟಿಸುಗಳು:—

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..	2 8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1 4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕರ್ಷ ಅನುಸರಿಸಿ ದಿವಾಳೀ ಅಪ್ಲಿಕೇರ್ಷಗಳ ಬಗ್ಯೆ ನೋಟೀಸುಗಳಿಗೆ:—

	ರೂ. ಆ.
ಮೊದಲನೇ ಸಲಕ್ಕೆ	5 0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2 8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕರ್ಷ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.